## ಆಡುಮಾತು ಬದಲಾಗಲಿ

ಗಂಗಾ ಧಾರಾವಾಹಿಯಲ್ಲಿ ಇತರ ಪ್ರಾಂತ್ಯದ ಕನ್ನಡ ಮಾತುಗಳನ್ನು ಬಳಸುತ್ತಿರುವುದು ನಿಜವಾಗಿಯೂ ಹೊಗಳತಕ್ಕದ್ದು. ಆದರೆ ಅದು ತರ್ಕಕ್ಕೆ ಕುತ್ತು ತರುವಂತಿದೆ. ಸಣ್ಣವಳಿದ್ದಾಗ ಗಂಗಾಳು ಆಡುತ್ತಿದ್ದ ಹವಿಗನ್ನಡವು ಅವಳು ದೊಡ್ಡವಳಾದ ಮೇಲೂ ಹಾಗೆಯೇ ಇದೆ. ಸುಮಾರು ಹತ್ತು ವರುಷ ಕಾಲವನ್ನು ಬಾದಾಮಿಯಲ್ಲಿ ಬಾದಾಮಿ ಕನ್ನಡದ ನಡುವೆ ಕಳೆದರೂ ಅವಳ ಹವಿಗನ್ನಡದಲ್ಲಿ ಕಿಂಚಿತ್ತಾದರೂ ವ್ಯತ್ಯಾಸವೇ ಇಲ್ಲ. ಇನ್ನು ಮುಂದಾದರೂ ಅಲ್ಲಲ್ಲಿ 'ಆತು ಬಿಡು, ಚಲೋ ಇದ್ದಿ' ಎಂಬಿತ್ಯಾದಿಯ ಬಳಕೆ ಬಂದರೆ ಸಮಂಜಸವಾಗಿರುತ್ತದೆ.

-ವಿನಯ್ ಎ.ಎಸ್., ಬೆಂಗಳೂರು

## ಅರಚಾಟ ಕಡಿಮೆಯಾದ ಬಿಗ್ ಬಾಸ್

ಕಲರ್ಸ್ ಸೂಪರ್ ವಾಹಿನಿಯಲ್ಲಿ 106 ದಿನಗಳ ಕಾಲ ಬಿತ್ತರಗೊಂಡ ಬಿಗ್ ಬಾಸ್ ಸೀಜನ್ -5 ಬಹಳ ಅಚ್ಚುಕಟ್ಟಾಗಿ ಮೂಡಿ ಬಂದಿದೆ. ಈ ಭಾರಿಯ ಸೀಜನ್ 5ರಲ್ಲಿ ರೋಷ, ದ್ವೇಷ, ಕೂಗಾಟ, ಅರಚಾಟಗಳು ಬಹಳ ಕಡಿಮೆ ಇದ್ದವು. ಭಾಗವಹಿಸಿದ ಕೆಲವರನ್ನು ಬಿಟ್ಟರೆ ಬಹುತೇಕ ಎಲ್ಲಾ ಸ್ಪರ್ಧಿಗಳ ವರ್ತನೆ ಚೆನ್ನಾಗಿತ್ತು. ಬಿಗ್ ಬಾಸ್ ಮನೆ ಪ್ರತಿಯೊಬ್ಬ ವೀಕ್ಷಕರ ಮನೆಯ ಇನ್ನೊಂದು ಮುಖವೇ ಆಗಿದೆ. ನಮ್ಮ ನಡವಳಿಕೆ, ಕುತ್ಸಿತ ಬುದ್ಧಿ, ಸಿಟ್ಟು, ಅಸಹನೆ ಎಲ್ಲವನ್ನೂ ಬಿಟ್ಟು ಉತ್ತಮ ನಡವಳಿಕೆಯನ್ನು ಬೆಳಸಿಕೊಳ್ಳುವ ಮಹತ್ತರವಾದ ತಿಳಿವಳಿಕೆಯನ್ನು ಸಮಾಜಕ್ಕೆ ನೀಡಿದೆ.

ಖ್ಯಾತ ಚಿತ್ರನಟ ಸುದೀಪ್ ಪ್ರತಿವಾರ ಬಿಗ್ ಬಾಸ್ ಮನೆಯ ಹಿಂದಿನ ವಾರದ ಘಟನೆಗಳ ಮಾಡುತ್ತಿದ್ದ ಮೌಲ್ಯ ಮಾಪನ ಹಾಗೂ ಸ್ಪರ್ಧಿಗಳಿಗೆ ತಿದ್ದಿಕೊಳ್ಳಲು ಅವರು ನೀಡುತಿದ್ದ ಸಲಹೆಗಳು ಎಲ್ಲಾ ವೀಕ್ಷಕರ ಮೆಚ್ಚುಗೆಗೆ ಪಾತ್ರವಾಗಿವೆ.

ವಾರದ ಪತ್ರ

## ಗೊತ್ತು ಗುರಿಯಿಲ್ಲದ ಜೋಡಿಹಕ್ಕಿ

ಜೋಡಿಹಕ್ಕಿ ಧಾರಾವಾಹಿ ಆರಂಭವಾದಾಗ ಸಂತೋಷವಾಗಿತ್ತು. ಕಥಾಹಂದರ ವಿಭಿನ್ನವಾಗಿದೆ ಎನ್ನಿಸಿತ್ತು. ರಾಮನ ಮುಗ್ಧತೆ, ಅವನ ತಂದೆಯ ಸರಳತೆ, ಜಾನಕಿಯ ವಿಶಾಲ ಮನಸ್ಸು, ಅವಳಿಗೆ ಶಾಲಾ ಮಕ್ಕಳ ಬಗ್ಗೆ ಇರುವ ಪ್ರೀತಿ ಮನಸ್ಸಿಗೆ ಮುದ ನೀಡುತ್ತಿತ್ತು. ಆದರೆ ನಂದಿತಾಳ ಕುಹಕಬುದ್ಧಿ, ಅವಳು ಊರಿನ ಜನರೆಲ್ಲರ ಮೇಲೂ ಹಿಡಿತ ಸಾಧಿಸಿರುವಂತೆ ತೋರಿಸುತ್ತಿರುವುದು ನೈಜತೆಗೆ ದೂರವಾಗಿದೆ. ಜಾನಕಿಯನ್ನು ಕೆಲಸದಿಂದ ತೆಗೆದುಹಾಕುವ ಪ್ರಸಂಗವಂತೂ ತೀರಾ ಹಾಸ್ಯಾಸ್ಪದ. ಪತ್ತೇದಾರಿ ಪ್ರತಿಭಾ ಬಂದು ಸಾಧಿಸಿದ್ದೇನು? ನಿರ್ದೇಶಕರು ಏನನ್ನು ಹೇಳಲು ಬಯಸುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ. ದಯವಿಟ್ಟು ನೈಜತೆಗೆ ಒತ್ತುಕೊಡಿ.

-ಸಿ.ಎನ್.ಮುಕ್ತಾ, ಮೈಸೂರು

ಚಂದನ ಶೆಟ್ಟಿಯವರು ಚಾಂಪಿಯನ್ ಆಗಿ, ದಿವಾಕರ ಅವರು ರನ್ನರ್ ಅಪ್ ಆಗಿ ಹೊರ ಹೊಮ್ಮಿದ್ದಾರೆ. ಇದು ಜನತೆ ಕೊಟ್ಟ ಅತ್ಯಂತ ಪ್ರಾಮಾಣಿಕವಾದ ಫಲಿತಾಂಶ ಎಂದೇ ಹೇಳಬೇಕು. ಸಾಕಷ್ಟು ಹಿನ್ನೆಲೆ ಹೊಂದಿರುವ ಪ್ರತಿಭಾವಂತ ಆಟಗಾರ ಚಂದನ ಶೆಟ್ಟಿಯವರ ಗೆಲುವಿನ ನಿರೀಕ್ಷೆ ವೀಕ್ಷಕರಿಗೆ ನಿರಾಸೆ ಆಗಲಿಲ್ಲ. ಆದರೆ ಯಾವುದೆ ಹಿನ್ನೆಲೆ ಇಲ್ಲದ, ಎರಡನೆ ತರಗತಿಯವರೆಗೆ ಓದಿದ ಒಬ್ಬ ಸೇಲ್ಸ್‌ಮನ್ ದಿವಾಕರ ಎರಡನೆ ಸ್ಥಾನ ಪಡೆದದ್ದು ನಿಜಕ್ಕೂ ಶ್ಲಾಘನೀಯವಲ್ಲದೆ ಪ್ರಾಮಾಣಿಕವಾಗಿ ಪ್ರಯತ್ನ ಪಟ್ಟರೆ ಏನನ್ನೂ ಸಾಧಿಸಬಹುದು ಎಂಬುದಕ್ಕೆ ಮಾದರಿಯಾಗಿ ನಿಲ್ಲುತ್ತಾರೆ.

-ಪ.ಚಂದ್ರಕುಮಾರ ಗೌನಹಳ್ಳಿ, ಚಿತ್ರದುರ್ಗ;
ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

## ವಿಶಿಷ್ಟ ಶುಭೋದಯ

ಚಂದನ ಕನ್ನಡ ವಾಹಿನಿಯಲ್ಲಿ ನಿರ್ಮಲಾ ಸಿ. ಎಲಿಗಾರ ಇವರ ನಿರ್ದೇಶನದ 'ಶುಭೋದಯ ಕರ್ನಾಟಕ' ಎಂಬ ವಿನೂತನ ಕಾರ್ಯಕ್ರಮ ಅನೇಕ ಜನ ಕವಿಗಳು, ನಟರು, ಸಂಗೀತಗಾರರು ಮತ್ತು ಬೇರೆ ವಿಭಾಗದಲ್ಲಿ ಪ್ರಸಿದ್ಧಿಯನ್ನು ಪಡೆದ ಮಹನೀಯರ ಸಂದರ್ಶನದ ವಿಶಿಷ್ಟ ಕಾರ್ಯಕ್ರಮಗಳಿಂದಾಗಿ ವೀಕ್ಷಕರನ್ನು ಸೆಳೆಯುತ್ತಿದೆ. ಈಗ 50ನೇ ಸಂಚಿಕೆಯ ಸಂಭ್ರಮ. ಅದರ ನೆನಪಿಗಾಗಿ ದಿನಾಂಕ 25-1-2018 ರಂದು ಕನ್ನಡನಾಡಿನ ಹಿರಿಯ ಪತ್ರಕರ್ತರು, ನಾಡೋಜ ಪಾಟೀಲ ಪುಟ್ಟಪ್ಪನವರೊಡನೆ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಅದರಲ್ಲಿ ಪಾಟೀಲ ಪುಟ್ಟಪ್ಪನವರು ತಮ್ಮ ಹೋರಾಟದ ಬದುಕಿನ ಮತ್ತು ಪತ್ರಿಕಾ ರಂಗದಲ್ಲಿ ತಾವು ನಡೆದ ಬಂದ ದಾರಿಯ ಬಗ್ಗೆ ವಿವರ ನೀಡಿದರು. ಕನ್ನಡ ಸಂಗೀತ, ಸಾಹಿತ್ಯ ಮತ್ತು ಇತರ ರಂಗಗಳಲ್ಲಿ ಖ್ಯಾತಿ ಪಡೆದ ದಿಗ್ಗಜರನ್ನು ಪರಿಚಯಿಸುವ ಇಂತಹ ಇನ್ನಷ್ಟು ಕಾರ್ಯಕ್ರಮಗಳು ಕನ್ನಡ ವಾಹಿನಿಗಳಲ್ಲಿ ಬರಲಿ ಎಂದು ಆಶಿಸೋಣ.

—ಕೆ.ಪಿ. ರಾಮಗುಂಡಿ, ಬೈಲಹೊಂಗಲ

## ಕಡಿವಾಣ ಅಗತ್ಯ

ಖಾಸಗಿ ಟಿವಿಯ ವಾರ್ತಾ ವಾಹಿನಿಗಳು ಇಂದು ಸ್ಪರ್ಧೆಗಿಳಿದಿವೆ. ಏನಾದರೂ ಸರಿ, ಹೇಗಾದರೂ ಸರಿ, ನಾವು ಮೊದಲು ಪ್ರಸಾರ ಮಾಡಬೇಕು ಎಂಬ ಪೈಪೋಟಿ ಮತ್ತು ಅವಸರದಿಂದ ಆಗುವ ಅನಾಹುತಗಳ ಬಗ್ಗೆ ಅವರಿಗೆ ಕಾಳಜಿ ಇಲ್ಲ, ನ್ಯಾಯಬದ್ಧವಾಗಿ ಮಾತನಾಡಲು ಬರದವರನ್ನು ಸ್ಟುಡಿಯೋಗೆ ಆಹ್ವಾನಿಸಿ ಚರ್ಚೆ ನಡೆಸುವುದರಿಂದ ಆಗುವ ಪರಿಣಾಮಗಳ ಬಗ್ಗೆ ಅರಿವು ಇದ್ದಂತಿಲ್ಲ.

ಸೆಲೆಬ್ರಿಟಿಗಳ, ರಾಜಕೀಯ ವ್ಯಕ್ತಿಗಳ ಕುಟುಂಬದ ವಿಷಯ ಚರ್ಚೆ, ಜೊತೆಗೆ ಫೋನ್-ಇನ್ ಕಾರ್ಯಕ್ರಮ ನಡೆಸುತ್ತಾರೆ. ಕೆಲವು ವೈಯಕ್ತಿಕ ವಿಷಯವನ್ನು ವಾಹಿನಿಗಳು ಅದನ್ನು ರಾಜಕೀಯ ಮತ್ತು ಧರ್ಮಗಳಿಗೆ ತಳಕು ಹಾಕಿ ತಮ್ಮ ಮುಖ್ಯ ಆಹಾರವಾಗಿಸಿಕೊಂಡಿವೆ. ಇದರಿಂದ ರಾಜಕೀಯ ಪಕ್ಷಗಳು ಮತ್ತು ವಿವಿಧ ಧರ್ಮಗಳ ನಡುವೆ ವೈರತ್ವ ಹೆಚ್ಚುವುದೇ ಹೊರತು ಸಮನ್ವಯ ಹೊಂದಾಣಿಕೆಯಾಗಲು ಸಾಧ್ಯವಿಲ್ಲ, ರಾಜಕಾರಣಿಗಳ ನಡೆ-ನುಡಿಗಳ ಹಿಂದೆ ದ್ವೇಷ, ಅಸಹನೆ ಮತ್ತು ಸ್ವಾರ್ಥದ ಕೊಳಕಿರುತ್ತದೆ. ವಿವೇಕ, ವಿವೇಚನೆಗಳ ಲಗಾಮು ಇರುವುದಿಲ್ಲ. ನ್ಯಾಯಾಲಯಗಳಲ್ಲಿ ನಿರ್ಣಯವಾಗಬೇಕಾದ ವಿಷಯಗಳು ಈಗ ವಾರ್ತಾವಾಹಿನಿಗಳಲ್ಲಿ ಚರ್ಚೆಯಾಗುತ್ತಿವೆ. ಸಮಾಜದ ಸ್ವಾಸ್ಥ್ಯ ಕದಡುವತ್ತ ಹೆಜ್ಜೆ ಹಾಕುತ್ತಿರುವ ವಾಹಿನಿಗಳು ಆತ್ಮ ವಿಮರ್ಶೆ ಮಾಡಿಕೊಳ್ಳಲಿ.

—ವೀಣಾಶಂಕರ್, ಬೆಂಗಳೂರು

## ದುಷ್ಟರ ಸಂಹಾರ

ಕನ್ನಡ ಕಲರ್ಸ್ ವಾಹಿನಿಯಲ್ಲಿ ಈ ವಾರವನ್ನು 'ದುಷ್ಟರ ಸಂಹಾರ ವಾರ'ವನ್ನಾಗಿ ಆಚರಿಸಬಹುದು. ರಾಧಾ ರಮಣದ ಸಿತಾರಾ, ಅಗ್ನಿಸಾಕ್ಷಿಯ ಚಂದ್ರಿಕಾ-ಕಿಶೋರ, ಕುಲವಧು ಮತ್ತು ಕಿನ್ನರಿಯ ಅಜ್ಜಿಯರು, ಪುಟ್ಟಗೌರಿಯ ಸಾಗರಿ... ಇವರನ್ನೆಲ್ಲಾ ಸಂಹಾರ ಮಾಡಿ ಬೇಗ ನಮಗೆ ಮುಕ್ತಿ ನೀಡಲೆಂದು ಆಶಿಸುತ್ತೇವೆ.

—ಮಹಾಂತೇಶ ಪಾಟೀಲ, ಹುನಗುಂದ

## ತಾಳ್ಮೆಯ ಪರೀಕ್ಷೆ

ಕನ್ನಡ ಕಲರ್ಸ್ ವಾಹಿನಿಯಲ್ಲಿ ಸಂಜೆ ಪ್ರಸಾರವಾಗುವ ಕಿನ್ನರಿ ಅನಗತ್ಯವಾದ ದೃಶ್ಯಗಳಿಂದ ವೀಕ್ಷಕರ ತಾಳ್ಮೆಯನ್ನು ಪರೀಕ್ಷಿಸುತ್ತದೆ. ಗಾಯತ್ರಿಯ ಅಜ್ಜಿಯ ಮಾತು, ಅಭಿನಯ, ನಟನೆ ಅತಿಯಾಯಿತು. ಅವಳು ಮಕ್ಕಳಂತೆ ಆಟವನ್ನು ಏಕಾಂಗಿಯಾಗಿ ಆಡುತ್ತಿರುವುದು ಅಗತ್ಯವಾಗಿರಲಿಲ್ಲ. ಮಣಿಯ ಪಾತ್ರ, ನಟನೆ ಚೆನ್ನಾಗಿದೆ.

—ರತ್ನಾಕರ ಹೆಗಡೆಕಟ್ಟೆ, ಮೂಡಬಿದ್ರಿ